1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ರಾಮನಗರ

# Spl.C.No.181/2017

ಪಿರ್ಯಾದಿ : ರಾಜ್ಯದ ಪರವಾಗಿ
ತಾವರಕೆರೆ
ಪೊಲೀಸ್ ಠಾಣೆ

## ವಿರುದ್ಧ

ಆರೋಪಿಗಳು : ಸಿದ್ದರಾಜು ಮತ್ತು ಇಬ್ಬರು

## ದೋಷಾರೋಪಣೆ

ಶ್ರೀ ಉಮೇಶ್ ಮೂಲಿಮನಿ, 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ರಾಮನಗರ, ಆದ ನಾನು, ಆರೋಪಿತರು,

1. ಸಿದ್ದರಾಜು ಬಿನ್ ರಂಗಯ್ಯ,
   28 ವರ್ಷ,

2. ರಾಜೇಶ್ವರಿ ಆರ್
   ಕೋಂ. ಸಿದ್ದರಾಜು,
   22 ವರ್ಷ,
   ಆರೋಪಿ 1 ಮತ್ತು 2 ರವರ
   ವಾಸ ಕೇರ್ ಆಫ್ ಸುರೇಶ್,
   ಕಡಬಗೆರೆ ಗೇಟ್,
   ದಾಸನಪುರ ಹೋಬಳಿ,
   ಬೆಂಗಳೂರು ಉತ್ತರ ತಾಲ್ಲೂಕು.

3. ಅಭಿಷೇಕ್ ಬಿನ್ ಲೇ. ಮಂಜುನಾಥ್
   23 ವರ್ಷ,
   ವಾಸಃ ಪೈಪ್‌ಲೈನ್ ರಸ್ತೆ,

ದೊಡ್ಡಗೊಲ್ಲರಹಟ್ಟಿ,
ಯಶವಂತಪುರ ಹೋಬಳಿ,
ಬೆಂಗಳೂರು ಉತ್ತರ ತಾಲ್ಲೂಕು.

ಆದ ನಿಮ್ಮ ವಿರುದ್ದ ಮಾಡುವ ದೋಷಾರೋಪಣೆ ಏನೆಂದರೆ,

ದಿಃ 28.08.2017 ರಂದು ರಾತ್ರಿ ಸುಮಾರು 10.30 ಗಂಟೆ ಸಮಯದಲ್ಲಿ, ತಾವರೆಕೆರೆ ಪೊಲೀಸ್ ಠಾಣಾ ಸರಹದ್ದು, ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ತಿಪ್ಪಗೊಂಡನಹಳ್ಳಿ ಬಳಿ ಇರುವ ಗುಡ್ಡದ ಪ್ರದೇಶದಲ್ಲಿ 1 ರಿಂದ 3 ನೇ ಆರೋಪಿಗಳಾದ ನಿಮ್ಮ ಪೈಕಿ, 2 ನೇ ಆರೋಪಿಯಾದ ನೀನು ಈ ಹಿಂದೆ ಮದುವೆಯಾಗಿ ಗಂಡನನ್ನು ಬಿಟ್ಟಿದ್ದು, ನಂತರ ಮೃತ ಹೇಮಂತ್ ಕುಮಾರ್‌ನನ್ನು ಮದುವೆಯಾಗಿದ್ದು, 2 ವರ್ಷಗಳ ನಂತರ ಸಂಸಾರದ ವಿಚಾರದಲ್ಲಿ ಗಲಾಟೆ ಮಾಡಿಕೊಂಡು ಹೇಮಂತ್ ಕುಮಾರನನ್ನು ಬಿಟ್ಟು ಈಗ್ಗೆ 2 ವರ್ಷಗಳ ಹಿಂದೆ 1 ನೇ ಆರೋಪಿಯಾದ ನಿನ್ನನ್ನು ಮದುವೆಯಾಗಿ ಸಂಸಾರ ಮಾಡಿಕೊಂಡು ಬೆಂಗಳೂರಿನ ಕಡಬಗೆರೆ ಕ್ರಾಸ್‌ನಲ್ಲಿ ವಾಸವಾಗಿದ್ದು, 1 ಮತ್ತು 2 ನೇ ಆರೋಪಿಗಳಾದ ನೀವು ಆಗಾಗ್ಗೆ ಮಾಗಡಿ ಟೌನ್‌ಗೆ ಬಂದು

ಹೋಗುತ್ತಿದ್ದು, ಆ ಸಮಯದಲ್ಲಿ ಹೇಮಂತ್ ಕುಮಾರ 1 ನೇ ಆರೋಪಿಯಾದ ನಿನಗೆ ನೀನು ನನ್ನ ಹೆಂಡತಿಗೆ ಚಿತಾವಣೆ ಮಾಡಿ ನನ್ನಿಂದ ಅವಳನ್ನು ಬೇರೆ ಮಾಡಿ, ನೀನು ಮದುವೆಯಾಗಿದ್ದೀಯಾ ಎಂದು ಸಣ್ಣಪುಟ್ಟ ಜಗಳ ಮಾಡುತ್ತಿದ್ದು, ಇದೇ ವಿಚಾರವಾಗಿ 1 ನೇ ಆರೋಪಿಯಾದ ನೀನು ಹೇಮಂತ್ ಕುಮಾರನ ಮೇಲೆ ದ್ವೇಷ ಇಟ್ಟುಕೊಂಡು ಹೇಗಾದರೂ ಮಾಡಿ, ಆತನಿಗೆ ಒಂದು ಗತಿ ಕಾಣಿಸಬೇಕೆಂದು ತೀರ್ಮಾನ ಮಾಡಿಕೊಂಡು, ಚಾಸಾ.21 ರವರ ಬಾಬ್ತು ಕಾರನ್ನು ಪಡೆದುಕೊಂಡು, 1 ಮತ್ತು 2 ನೇ ಆರೋಪಿಗಳಾದ ನೀವು, ಕಾರಿನಲ್ಲಿ ಮಾಗಡಿಗೆ ಬಂದು, ಮಾಗಡಿ ಟೌನ್‌ನಲ್ಲಿ ಸಂಜೆ ಸುಮಾರು 5.30 ಗಂಟೆಗೆ ಮೃತ ಹೇಮಂತ್ ಕುಮಾರ್‌ರವರು 1 ನೇ ಆರೋಪಿಯಾದ ನಿನಗೆ ಸಿಕ್ಕಿದ್ದು, ಆತನಿಗೆ ಮಾಡಿಗೆ ಪದ್ಮ ವೈನ್ಸ್ ನಲ್ಲಿ ಕುಡಿಸಿ, ಬಲವಂತವಾಗಿ ಕಾರಿನಲ್ಲಿ ಕೂರಿಸಿಕೊಂಡು ಅಪಹರಣ ಮಾಡಿಕೊಂಡು ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **363** ಸಹಕಲಂ **34** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಮಾಡಲಾಗಿದೆ.

ಎರಡನೇಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, ಸಮಾನ ಉದ್ದೇಶದಿಂದ, 1ನೇ ಆರೋಪಿಯಾದ ನೀನು ಹೇಮಂತ್ ಕುಮಾರನನ್ನು ಕೊಲೆ ಮಾಡುವ ಉದ್ದೇಶದಿಂದ ಪುನಃ ಕಡಬಗೆರೆಯ ಬೆಂಗಳೂರು ವೈನ್ಸ್ ನಲ್ಲಿ ಕುಡಿಸಿ, ನಂತರ 1 ಮತ್ತು 2ನೇ ಆರೋಪಿಗಳಾದ ನೀವು ಹೇಮಂತ್ ಕುಮಾರನನ್ನು ಮಾಗಡಿಗೆ ಬಿಟ್ಟು ಬರಲು ಬಾಡಿಗೆ ಕಾರನ್ನು ಮಾಡಲು ತಿಳಿಸಿದ್ದು, 2ನೇ ಆರೋಪಿಯಾದ ನೀನು ತನಗೆ ಪರಿಚಯವಿರುವ 3ನೇ ಆರೋಪಿಯಾದ ನಿನಗೆ ಬಾಡಿಗೆ ಬರಲು ತಿಳಿಸಿದ್ದು, ಅಲ್ಲಿಂದ 1, 2 ಮತ್ತು 3ನೇ ಆರೋಪಿಗಳಾದ ನೀವು ತಂದಿದ್ದ ಟಾಟಾ ಮ್ಯಾಜಿಕ್ ವಾಹನದಲ್ಲಿ ಹೇಮಂತ್ ಕುಮಾರನನ್ನು ಜೊತೆಯಲ್ಲಿ ಕೂರಿಸಿಕೊಂಡು ಬೆಂಗಳೂರು ಮಾಗಡಿ ಮುಖ್ಯರಸ್ತೆ ತಾವರೆಕೆರೆಗೆ ಬಂದು ತಾವರೆಕೆರೆ ಸಂತೆ ಮೈದಾನದಲ್ಲಿರುವ ಮಧು ವೈನ್ಸ್ ಗೆ 1ನೇ ಆರೋಪಿಯಾದ ನೀನು ಹೇಮಂತ್ ಕುಮಾರನನ್ನು ಕರೆದುಕೊಂಡು ಹೋಗಿ ಚೆನ್ನಾಗಿ ಕುಡಿಸಿಕೊಂಡು ಬಂದು ಟಾಟಾ ಮ್ಯಾಜಿಕ್ ವಾಹನದಲ್ಲಿ ಕೂರಿಸಿಕೊಂಡು ತಿಪ್ಪಗೊಂಡನಹಳ್ಳಿ ಬಳಿ ಇರುವ ಗುಡ್ಡದ ಪ್ರದೇಶಕ್ಕೆ ಕರೆದುಕೊಂಡು ಹೋಗಿ, 1ನೇ ಆರೋಪಿಯಾದ ನೀನು

ಹೇಮಂತ್ ಕುಮಾರನನ್ನು ವಾಹನದಿಂದ ಹೊರಕ್ಕೆ ಎಳೆದುಕೊಂಡಿದ್ದು, ಹೆಚ್ಚಿಗೆ ಕುಡಿಸಿದ್ದರಿಂದ ಮೃತ ಹೇಮಂತ್ ಕುಮಾರ ನಿಲ್ಲಲೂ ಆಗದೇ ತೂರಾಡುತ್ತಾ ಕೆಳಕ್ಕೆ ಬಿದ್ದಾಗ, 1 ನೇ ಆರೋಪಿಯಾದ ನೀನು ಹೇಮಂತ್ ಕುಮಾರನನ್ನು ಕೊಲೆ ಮಾಡುವ ಉದ್ದೇಶದಿಂದ ಪಕ್ಕದಲ್ಲೇ ಇದ್ದ ಒಂದು ಕಲ್ಲನ್ನು ತಲೆಯ ಮೇಲೆ ಎತ್ತಿ ಹಾಕಿ ಕೊಲೆ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **302** ಸಹಕಲಂ **34** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಮಾಡಲಾಗಿದೆ.

ಮೂರನೇಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, ಸಮಾನ ಉದ್ದೇಶದಿಂದ, 2 ಮತ್ತು 3 ನೇ ಆರೋಪಿಗಳಾದ ನೀವು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದ್ದರೂ ಸಹ ವಿಚಾರವನ್ನು ಮೃತನ ಮನೆಯವರಿಗಾಗಲೀ ಅಥವಾ ಪೊಲೀಸರಿಗಾಗಲೀ ತಿಳಿಸದೇ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ ಉದ್ದೇಶದಿಂದ ಕೃತ್ಯವನ್ನು ಮರೆಮಾಚಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **201** ಸಹಕಲಂ

34 ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪ ಮಾಡಲಾಗಿದೆ.

ನಾಲ್ಕನೇಯದಾಗಿ, ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, ಸಮಾನ ಉದ್ದೇಶದಿಂದ, 1 ನೇ ಆರೋಪಿಯಾದ ನಿನಗೆ ಮೃತ ಹೇಮಂತ್ ಕುಮಾರ ಪರಿಶಿಷ್ಟ ಜಾತಿಯವನು ಎಂದು ಗೊತ್ತಿದ್ದರೂ ಸಹ ಆತನನ್ನು ಕೊಲೆ ಮಾಡಿ ದೌರ್ಜನ್ಯವೆಸಗಿ, ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ದಂಡಿಸಬಹುದಾದ ಅಪರಾಧ ಎಸಗಿ, ಆ ಮೂಲಕ ಎಸ್.ಸಿ./ಎಸ್.ಟಿ. (ಪಿ.ಎ.) Amendment Act 2015 ರ ಕಲಂ 3(2)(va)ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆರೋಪಿ ಮಾಡಲಾಗಿದೆ.

**(ದಿಃ 26.10.2018 ರಂದು ಆರೋಪಿಗಳಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಯಿತು ಹಾಗೂ ಅದನ್ನು ತಿಳಿದುಕೊಂಡು ಆರೋಪಿಗಳು ಉತ್ತರಿಸಿದ್ದಾರೆ)**

(ಉಮೇಶ್ ಮೂಲಿಮನಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.